# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22 ದಿನಾಂಕ: 04.09.2021

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:-04.09..2021 ರಂದು ಅಪರಾಹ್ನ 03.00ಗಂಟೆಗೆ ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

<u>ಉಪಸ್ಥಿತರು:</u>

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ಸಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಚಂದ್ರಶೇಖರ್.ಎ.ಜಿ | ಸ.ಕಾ.ಅ (ಹೊರಮಾವು ಉಪ-ವಿಭಾಗ) | 9844587466 |
| 3 | ಶ್ರೀ. ಸಂಜಯ್ ಕುಮಾರ್.ಎಸ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9742919411 |
| 4 | ಶ್ರೀ.ಕೋದಂಡರಾಮ | ಸ್ಟ್ರಿಟ್ ಲೈಟ್ ಗುತ್ತಿಗೆದಾರರು | |
| 5 | ಶ್ರೀ.ದಯಾನಂದ್ (ಪ್ರಸಿಡೆಂಟ್) | ದಾಸಪ್ಪ ಲೇಔಟ್ | |
| 6 | ಶ್ರೀ.ಕೇಶವ್ | ದಾಸಪ್ಪ ಲೇಔಟ್ | |
| 7 | ಶ್ರೀ.ಸಂಪತ್ ಕುಮಾರ್ | ಚೇಳಕೆರೆ | 9686115500 |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

<u>ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-</u>

<u>*ಶ್ರೀ.ದಯಾನಂದ್, ದಾಸಪ್ಪ ಲೇಔಟ್:-*</u> ರವರು ಮಾತನಾಡುತ್ತಾ, ನಂ.13, 2ನೇ ಕ್ರಾಸ್, 3ನೇ ಬ್ಲಾಕ್, ದಾಸಪ್ಪಲೇಔಟ್ ರಲ್ಲಿ ಸುಮಾರು ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆ ವತಿಯಿಂದ ಕಾವೇರಿ ನೀರು ಸಂಪರ್ಕಕ್ಕಾಗಿ ಪೈಪುಗಳನ್ನು ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಇಹಲ್‌ವರೆವಿಗೂ ರಸ್ತೆ ಸಮಪಾಲು ಇಲ್ಲದೇ ಸಾರ್ವಜನಿಕರ ಓಡಾಟಕ್ಕೆ ಮತ್ತು ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ರಸ್ತೆಗಳನ್ನು ಸರಿಪಡಿಸಲು ಹಾಗೂ ಕುಡಿಯುವ ನೀರು ಕಡಿಮೆ ಸರಬರಾಜು ಆದಾಗ ನೀರಿನ ಸಮಸ್ಯೆ ಪರಿಹರಿಸಲು ದುರಸ್ಥಿಯಲ್ಲಿರುವ 4-5 ಕೊಳವೆಸಾಲು ಪೈಪ್‌ಗಳ ಕನೆಕ್ಷನ್‌ಗಳನ್ನು ಒಂದೇ ಬೋರ್‌ವೆಲ್‌ಗೆ ಸಂಪರ್ಕ ಕಲ್ಪಿಸಿದ್ದಲ್ಲಿ ನೀರಿನ ಸಮಸ್ಯೆಯನ್ನು ಪರಿಹರಿಸಬಹುದೆಂದು ಅಥವಾ ದುರಸ್ಥಿಯಲ್ಲಿರುವ ಬೋರ್‌ವೆಲ್‌ಗಳನ್ನು ಸರಿಪಡಿಸಿ ಕೊಡಲು ಕೋರಿದರು.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ/ಹೊರಮಾವು ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

Scanned with CamScanner

<u>ಶ್ರೀ.ಕೇಶವ್, ದಾಸಪ್ಪ ಲೇಔಟ್:-</u> ರವರು ಮಾತನಾಡಿ, 2ನೇ ಕ್ರಾಸ್, 3ನೇ ಬ್ಲಾಕ್, ದಾಸಪ್ಪಲೇಔಟ್ ಇಲ್ಲಿ ಬೀದಿ ದೀಪ/ ವಿದ್ಯುತ್ ಕಂಬಗಳ ಸ್ವಿಚ್‌ಗಳು ದುರಸ್ಥಿಯಾಗಿದ್ದು, ದುರಸ್ಥಿಯನ್ನು ಸರಿಪಡಿಸಿ ಕೊಡಲು ಹಾಗೂ ಎಲ್.ಇ.ಡಿ ಬಲ್ಬ್‌ಗಳನ್ನು ಅಳವಡಿಸಲು ಕೋರಿದರು. ಮತ್ತು ಸದರಿ ಬಡಾವಣೆಯಲ್ಲಿ ರಾತ್ರಿ ವೇಳೆಯಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಮುಖ್ಯರಸ್ತೆಗಳಲ್ಲಿ 2 ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿಕೊಡಬೇಕೆಂದು, ಮತ್ತು ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಕೋರಿಕೊಂಡಿರುತ್ತಾರೆ. ಹಾಗೂ ಈ ಬಡಾವಣೆಯಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಹಿಂದಿನ ಸಾಲಿನಲ್ಲಿ ಲ್ಯಾಪ್‌ಟಾಪ್ ವಿತರಿಸಲು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಲು ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ತಿಳಿಸಿದರು.
<u>ಕ್ರಮ:-</u> ಬೀದಿ ದೀಪಗಳ ನಿರ್ವಹಣೆ ಅಧಿಕಾರಿಗಳಾದ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೋಲೀಸ್ ಇಲಾಖೆ ರವರು ಅಗತ್ಯ ಕ್ರಮವಹಿಸಲು, ಸಭೆಯು ಸೂಚಿಸಿತು.

<u>ಶ್ರೀ. ಸಂಪತ್ ಕುಮಾರ್, ಚೇಳಿಕೆರೆ ಗ್ರಾಮಸ್ಥರು:-</u> ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಅನುಸಾರ ಪ್ರಗತಿಯ ಬಗ್ಗೆ ಮತ್ತೊಮ್ಮೆ ಚರ್ಚಿಸಿದರು. ಚೇಳಿಕೆರೆ ಗ್ರಾಮದಲ್ಲಿ ವಾಟರ್‌ಟ್ಯಾಂಕ್ (ಓವರ್‌ಹೆಡ್ ಟ್ಯಾಂಕ್) ಶಿಥಿಲಾವಸ್ಥೆಯಲ್ಲಿದ್ದು, ಸದರಿ ಓವರ್‌ಹೆಡ್ ಟ್ಯಾಂಕ್ ಬೀಳುವ ಸಂಭವವಿದ್ದು, ಇದರಿಂದ ಇಲ್ಲಿನ ಸಾರ್ವಜನಿಕರಿಗೆ ಪ್ರಾಣಹಾನಿಯಾಗುವ ಸಂಭವವಿರುತ್ತದೆ. ಸದರಿ ಟ್ಯಾಂಕ್‌ನ್ನು ತುರ್ತಾಗಿ ಒಡೆದು ಹಾಕಲು ಮತ್ತು ಈ ಸ್ಥಳದಲ್ಲಿ ಹೊಸ ಟ್ಯಾಂಕ್‌ನ್ನು ನಿರ್ಮಾಣ ಮಾಡಿಕೊಡಲು ಕೋರಿಕೊಂಡಿರುತ್ತಾರೆ. ವಾರ್ಡ್ ಸಂಖ್ಯೆ 25 ರ ಚೇಳಿಕೆರೆ ಗ್ರಾಮದಲ್ಲಿ ಶ್ರೀರಾಮನ ದೇವಸ್ಥಾನ ಬಳಿ ಗುತ್ತಿಗೆದಾರರು ರಸ್ತೆಗಳನ್ನು ಅಗೆದಿದ್ದು, ತಹಲ್‌ವರೆವಿಗೆ ರಸ್ತೆಗಳನ್ನು ಸಮಥಾಲು ಮಾಡಿರುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಹಾಗೂ ಗಣೇಶ ಚತುರ್ಥಿಯ ಹಬ್ಬ ಮುಂಬರುವ ಕಾರಣ ಗಣೇಶಮೂರ್ತಿಗಳನ್ನು ವಿಸರ್ಜಿಸಲು ಕಲ್ಯಾಣಿಯನ್ನು ಸ್ವಚ್ಛಮಾಡಿ ಕೊಡಲು, ರಾಜಕಾಲುವೆ ಅಕ್ಕ-ಪಕ್ಕ ಸ್ವಚ್ಛತೆ ಕಾಪಾಡಲು ಸಭೆಯಲ್ಲಿ ಕೋರಿದರು.
<u>ಕ್ರಮ:-</u> ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗರವರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನ ತ್ಯಾಜ್ಯ ನಿರ್ವಹಣೆ ರವರಿಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಹೊರಮಾವು ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಬೃಹತ್ ರಸ್ತೆಗಳ ವಿಭಾಗ, ಬಾಣಸವಾಡಿ, ನಾಗವಾರ, ಆರಕ್ಷಕ ಸಿಬ್ಬಂಧಿಗಳು- ರಾಮಮೂರ್ತಿನಗರ, ಹೆಣ್ಣೂರು ಪೋಲೀಸ್‌ಠಾಣೆ, ಆರಕ್ಷಕ ಸಿಬ್ಬಂಧಿಗಳು ಸಂಚಾರ ವಿಭಾಗ-ಕೆ.ಆರ್.ಪುರ, ರಾಮಮೂರ್ತಿನಗರ, ಬಾಣಸವಾಡಿ ಹಾಗೂ ಸಹಾಯಕ ಅಭಿಯಂತರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಈ ದಿನ ಸಭೆಗೆ ಹಾಜರಾಗಲು ಸೂಚಿಸಿದ್ದರೂ ಸಹ ಸದರಿ ರವರು ಗೈರುಹಾಜರಾಗಿದ್ದು, ಈ ಕುರಿತು ಸಾರ್ವಜನಿಕರು ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಹೊರಮಾವು ಉಪ-ವಿಭಾಗ
ಬಿ.ಬಿ.ಎಂ.ಪಿ